C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ No. 39/2021

ದಿನಾಂಕಃ 15.07.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯೂ : 11 ಪಿ. ಡಬ್ಲ್ಯೂ :10

| | |
|---|---|
| ಸಾಕ್ಷಿದಾರರ ಹೆಸರು | ಡಾ. ಗಾಯಿತ್ರಿದೇವಿ |
| ತಂದೆಯ ಹೆಸರು | ಲೇಟ್ ಬಿ. ಎಸ್. ಭೀಮನಾಯಕ್ |
| ವಯಸ್ಸು | 64 ವರ್ಷ |
| ಉದ್ಯೋಗ | Causality Medical officer, MIMS, Mandya. |
| ವಾಸ | ಮಂಡ್ಯ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. 2018 ರಿಂದ 2021 ರವರೆಗೂ ನಾನು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಮಿಮ್ಸ್ ಆಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯಕೀಯ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿಃ 30.09.2020 ರಲ್ಲಿ ಬೆ. 9.45 ಕ್ಕೆ ಚಾಸಾ 2 ಗಾಯಾಳು, ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಚಾಸಾ 1 ರವರೊಂದಿಗೆ ಬಂದಿದ್ದರು. ಅದೇ ದಿವಸ ಬೆ. 9.30 ಗಂಟೆಯಲ್ಲಿ 2 ನೇ ಕ್ರಾಸ್ , ಮರೀಗೌಡ ಬಡಾವಣೆ, ಮಂಡ್ಯದಲ್ಲಿ ಶಂಕರ್ , ಸಿದ್ದಪ್ಪ, ಗೀತಾ, ಭಾಗ್ಯ, ಲಕ್ಷ್ಮಿ ಮತ್ತು ಇತರರಿಂದ ಹಲ್ಲೆಯಾಗಿದೆ ಎಂದು ನನಗೆ ಚಾಸಾ 1 ರವರು ತಿಳಿಸಿದರು. ಗಾಯಾಳುವನ್ನು ಪರೀಕ್ಷಿಸಿದಾಗ ಈಗ ಕೆಳಕಂಡ ಗಾಯಗಳು ಕಂಡು ಬಂದವು.

1) Multiple lacerated wounds in face, forehead, chin, lips fresh bleeding and depressed fracture of the skull.

2) Bilateral black eyes , all are fresh wounds.

3) Mandibular fracture.

4) Bilateral nasal bleeding.

5) Scalp laceration from frontal to left temporal region.

ಗಾಯಾಳುವಿಗೆ ನಾನು ಪ್ರಥಮ ಚಿಕಿತ್ಸೆ ನೀಡಿದೆನು. ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಸರ್ಜರಿಗೆ (arthopedic and E and T) ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ರೆಫರ್ ಮಾಡಿದೆನು. ನಾನು ನೀಡಿದ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 34 ಎಂದು, ಅದರಲ್ಲಿ ಇರುವ ರುಜುವನ್ನು ನಿಪಿ 34(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ 1 ರಿಂದ 5 ಗಾಯಗಳು ತೀವ್ರ ಸ್ವರೂಪದ ಗಾಯಗಳು ಎಂದು ನನ್ನ ಅಭಿಪ್ರಾಯವನ್ನು ನೀಡಿದ್ದೇನೆ.

ಚಾಸಾ 2 ಗಾಯಾಳುವಿನ Brain C.T. Scan ವರದಿ, C.T. Scan face, ಮತ್ತು C.T. abdomen ವರದಿಗಳನ್ನು ಪರಿಶೀಲನೆ ಮಾಡಿ ಇದರ ಆಧಾರದ ಮೇಲೆ ನಾನು ಮೇಲೆ ಹೇಳಿದ ಗಾಯದ ಪ್ರಮಾಣ ಪತ್ರದಲ್ಲಿ ತೀವ್ರ ಸ್ವರೂಪದ ಗಾಯಗಳು ಎಂದು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಮು ಮಾ 6 ದಿಂಡುಗಲ್ಲು ನಿಂದ, ಹಲ್ಲೆ ಮಾಡಿದಾಗ ಮೇಲೆ ಹೇಳಿದ 1 ನೇ ಗಾಯ ಆಗುವ ಸಾಧ್ಯತೆ ಇರುತ್ತದೆ.

2 ನೇ ಗಾಯ, 3 ನೇ ಗಾಯ ಮತ್ತು ಉಳಿದ ಬಾಕಿ ಗಾಯಗಳು ನ್ಯಾಯಾಲಯದ ಮುಂದೆ ಇರುವ ಮು ಮಾ 1(ದೊಣ್ಣೆ) ಮತ್ತು ಮು.ಮಾ.2 (ದೊಣ್ಣೆ) ಯಿಂದ ಹಲ್ಲೆ ಮಾಡಿದಾಗ ಆಗುವ ಸಾಧ್ಯತೆಗಳು ಇರುತ್ತವೆ.

ಮೇಲೆ ಹೇಳಿದ 1 ರಿಂದ 5 ಗಾಯಗಳು 10 ರಿಂದ 15 ನಿಮಿಷದ ಅವಧಿ ಒಳಗೆ ಆಗಿದ್ದಂತಹ ಗಾಯಗಳಾಗಿದ್ದವು.

ಅದೇ ದಿನ ಚಾಸಾ 1 ಗಾಯಾಳು ತಿರುಮಲರವರನ್ನು ಸಹ ಬೆಳಿಗ್ಗೆ 9.50 ಗಂಟೆ ಸಮಯದಲ್ಲಿ ಪರೀಕ್ಷೆ ಮಾಡಿದಾಗ ಕೆಳಕಂಡ ಗಾಯಗಳು ಕಂಡು ಬಂದವು.

1) cut lacerated wound over the left ear lobe.

2| Multiple wounds over the back upper extrimities.

3) Pain and tenderness over the left scapula region.

4) Backache.

ಮೇಲೆ ಹೇಳಿದ 1 ರಿಂದ 3 ಗಾಯಗಳು ತೀವ್ರ ಸ್ವರೂಪದ ಗಾಯಗಳು ಮತ್ತು 4 ನೇ ಗಾಯ ಸಾಮಾನ್ಯ ಸ್ವರೂಪದ ಗಾಯ ಎಂದು ನನ್ನ ಅಭಿಪ್ರಾಯವನ್ನು ನೀಡಿದ್ದೇನೆ. ನಾನು ನೀಡಿದ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 35 ಎಂದು, ಅದರಲ್ಲಿ ಇರುವ ರುಜುವನ್ನು ನಿಪಿ 35(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿರುವ ಗಾಯಗಳು 10 ರಿಂದ 15 ನಿಮಿಷದ ಅವಧಿ ಒಳಗೆ ಆಗಿದ್ದಂತಹ ಗಾಯಗಳಾಗಿದ್ದವು.

ನ್ಯಾಯಾಲಯದ ಮುಂದೆ ಇರುವ ಮು.ಮಾ 1 ಮತ್ತು 2 ದೊಣ್ಣೆಗಳು, ಮು ಮಾ 3 ಮಚ್ಚು, ಮುಮಾ 4 ಮತ್ತು 5 ಕುಡುಗೋಲುಗಳಿಂದ ಹಲ್ಲೆ ಮಾಡಿದರೆ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆಗಳು ಇರುತ್ತವೆ. ಚಿಕಿತ್ಸೆಗೆ ಬಂದಿದ್ದ ಗಾಯಾಳುಗಳು ತಂದೆ - ಮಗ ಎಂದು ತಿಳಿಯಿತು.

ದಿಃ 30.09.2020 ರಲ್ಲಿ ಚಾಸಾ 2 ಗಾಯಾಳು ಸ್ವಾಮಿ ಬೆ. 9.45 ಗಂಟೆಗೆ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದಾಗ ಅದನ್ನು ಅಪಘಾತದ ರಿಜಿಸ್ಟರ್ ನಲ್ಲಿ ನಮೂದು ಮಾಡಿಕೊಂಡಿದ್ದು, ಅದರ extract ಪ್ರತಿಯನ್ನು ನಿಪಿ 36 ಎಂದು ಗುರುತಿಸಲಾಯಿತು.

ಅದೇ ದಿನ ಬೆ. 9.50 ಕ್ಕೆ ಚಾಸಾ 1 ತಿರುಮಲ ರವರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದಾಗ ಅದನ್ನು ಅಪಘಾತದ ರಿಜಿಸ್ಟರ್ ನಲ್ಲಿ ನಮೂದು ಮಾಡಿಕೊಂಡಿದ್ದು, ಅದರ extract ಪ್ರತಿಯನ್ನು ನಿಪಿ 37 ಎಂದು ಗುರುತಿಸಲಾಯಿತು.

ಈ ದಿವಸ ನಾನು ನ್ಯಾಯಾಲಯಕ್ಕೆ ಮೂಲ ಅಪಘಾತದ ರಿಜಿಸ್ಟರ್ ನ್ನು ತಂದಿದ್ದು, ಅದರ ಅಧಾರದ ಮೇಲೆ ನಾನು ಸಾಕ್ಷಿಯನ್ನು ನುಡಿದಿರುತ್ತೇನ್ನೆ.

ನಿಪಿ 36 ಮತ್ತು 37 extract ಪ್ರತಿಗಳಲ್ಲಿ, ಗಾಯಾಳುಗಳು ಬಂದಿದ್ದ ದಿನಾಂಕ, ಸಮಯ, ಕಾರಣಗಳು, ಯಾರು ಹೊಡೆದರು ಮತ್ತು ಗಾಯಾಳುವಿನ ಬಿ.ಪಿ. ಪಲ್ಸ್ ರೀಡಿಂಗ್ ಮತ್ತು ಏನೇನು ಗಾಯಗಳು ಆಗಿವೆ ಮಾಹಿತಿಯನ್ನು ನಮೂದು ಮಾಡಿದ್ದೇನೆ.

ಚಾಸಾ 1 ಗಾಯಾಳು ತಿರುಮಲರವರಿಗೆ ಸಂಬಂಧಪಟ್ಟ ಹೊರ ರೋಗಿ ವಿಭಾಗದ ಪುಸ್ತಕವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 38 ಎಂದು ಗುರುತಿಸಲಾಯಿತು.

ಸದರಿ ಪ್ರಕರಣದ ಆರೋಪಿಗಳಾದ ಶ್ರೀನಿಧಿ, ಲಕ್ಷ್ಮೀ, ಗೀತಾ, ಶಂಕರ ರವರಿಗೆ ಸಂಬಂಧಪಟ್ಟ ಹೊರ ರೋಗಿ ಪುಸ್ತಕಗಳನ್ನು, ಸದರಿಯವರಿಗೆ physical fitness test and covid- 19 test ಮಾಡಿರುವ ಬಗ್ಗೆ ಸದರಿ ಪುಸ್ತಕದಲ್ಲಿ ನಮೂದನ್ನು ಮಾಡಲಾಗಿದೆ. ಸದರಿ ಹೊರ ರೋಗಿಯ 4 ಪುಸ್ತಕಗಳನ್ನು ಈಗ ನೋಡುತ್ತಿದ್ದು ಇವುಗಳನ್ನು ನಿಪಿ 39 ರಿಂದ 42 ಎಂದು ಗುರುತಿಸಲಾಯಿತು.

ಗಾಯಾಳುಗಳು ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬಂದ ಸಮಯದಲ್ಲಿ ಈ ಬಗ್ಗೆ ಸಂಬಂಧಪಟ್ಟ ಠಾಣಾ ವ್ಯಾಪ್ತಿಯ ಪೊಲೀಸರಿಗೆ ಮಾಹಿತಿಯನ್ನು ಮೆಮೋ ಮೂಲಕ ನೀಡುತ್ತೇವೆ. ಸದರಿ ಮೆಮೋವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 43 ಎಂದು ಗುರುತಿಸಲಾಯಿತು. ಸದರಿ ಮೆಮೋವನ್ನು ನಾನು ನಮ್ಮ intership (trainees) ರವರಿಗೆ dictate ಮಾಡಿ ಬರೆಸಿರುತ್ತೇನೆ ಮತ್ತು ಸದರಿ ಮೆಮೋಗೆ intership (trainees) ರವರೇ ಸಹಿ ಮಾಡಿರುತ್ತಾರೆ.

ಪೊಲೀಸ್ ಠಾಣೆಯಿಂದ ನಮ್ಮ ಆಸ್ಪತ್ರೆಗೆ ಸದರಿ ಆಯುಧಗಳಿಂದ ಹಲ್ಲೆ ಮಾಡಿದಾಗ, ಗಾಯದ ಪ್ರಮಾಣ ಪತ್ರಗಳಾದ, ನಿಪಿ 34 ಮತ್ತು 35 ರಲ್ಲಿ, ಹೇಳಿರುವ ಗಾಯಗಳು ಆಗುವ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೋರಿ ಬರೆದಿರುವ ಒಂದು ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ 44 ಎಂದು ಗುರುತಿಸಲಾಯಿತು. ನಿಪಿ 44 ಕೋರಿಕೆಯ ಪತ್ರಕ್ಕೆ, ನಾನು ಪೊಲೀಸ್ ಠಾಣೆಗೆ, ಸದರಿ ಗಾಯಗಳು, ಸದರಿ ಆಯುಧಗಳಿಂದ, ಆಗುವ ಬಗ್ಗೆ, ನನ್ನ ಅಭಿಪ್ರಾಯವನ್ನು ತಿಳಿಸಿ, ಬರೆದಿರುವ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.45 ಎಂದು ಗುರುತಿಸಲಾಯಿತು. ಇದರಲ್ಲಿ ಇರುವ ನನ್ನ ರುಜುವನ್ನು ನೋಡುತ್ತಿದ್ದು ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಸಿ.ಪಿ ವಕೀಲರಿಂದಃ</u>

ಚಾಸಾ 2 ಸ್ವಾಮಿಗೆ ಆಗಿದ್ದ ಗಾಯದ ಹಿನ್ನೆಲೆಯನ್ನು ಅವರ ಮಗ ಚಾಸಾ 1 ತಿರುಮಲ ನನಗೆ ಹೇಳಿದ್ದರು. ಚಾಸಾ 1 ತಿರುಮಲ, ಸ್ವಾಮಿಗೆ ಆಗಿದ್ದ ಗಾಯಗಳನ್ನು ಹೇಳುವ ಸಮಯದಲ್ಲಿ ಚಾಸಾ 1 ರವರಿಗೂ ಸಹ ಗಾಯಗಳು ಆಗಿತ್ತು, ಆದರೆ ಅವರು stable ಆಗಿದ್ದರು. ಚಾಸಾ 1 ಮತ್ತು 2 ರವರೊಂದಿಗೆ ಅವರ ಸಂಬಂಧಿ ಶರತ್ ಎನ್ನುವವರು ಬಂದಿದ್ದರು. ನಿಪಿ 35 ಗಾಯದ ಪ್ರಮಾಣ ಪತ್ರದಲ್ಲಿ, ಗಾಯಾಳುವಿನ ಜೊತೆಯಲ್ಲಿ ಬಂದಿದ್ದ ವ್ಯಕ್ತಿಯ ಹೆಸರು ಶಂಕರ ಎಂದು ಇದೆ, ಶರತ್ ಎಂದು ಇಲ್ಲ ಎಂದರೆ ಸಾಕ್ಷಿಯು by oversight ಆಗಿದೆ ಎಂದು ಉತ್ತರಿಸುತ್ತಾರೆ. 1 ನೇ ಆರೋಪಿತ, ಶಂಕರ, ಗಾಯಾಳುಗಳಾದ ಚಾಸಾ 1 ಮತ್ತು 2 ರವನ್ನು ಚಿಕಿತ್ಸೆಗಾಗಿ ಅವರ ಜೊತೆಯಲ್ಲಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರಗಳಾದ ನಿಪಿ 34 ಮತ್ತು 35 ಗಳಲ್ಲಿಯೂ ಸಹ ಗಾಯದ ಹಿನ್ನೆಲೆ ಹಾಗೂ ಯಾರಿಂದ ಹಲ್ಲೆಯಾಗಿದೆ ಎಂದು ಬರೆಯಲೇಬೇಕು ಎಂದರೆ ಸಾಕ್ಷಿಯು ಸದರಿ format ನಲ್ಲಿ ಕಾಲಂ ಇಲ್ಲ, ಆದ್ದರಿಂದ ನಾವು ಈ ಮಾಹಿತಿಯನ್ನು ಬರೆಯುವುದಿಲ್ಲ ಎಂದು

ಉತ್ತರಿಸುತ್ತಾರೆ. Indian medical manual ಪ್ರಕಾರ, ಗಾಯದ ಪ್ರಮಾಣಪತ್ರದಲ್ಲಿ ಗಾಯದ ಹಿನ್ನೆಲೆ ಹಾಗೂ ಯಾರಿಂದ ಹಲ್ಲೆಯಾಗಿದೆ ಎಂಬ ಮಾಹಿತಿಯನ್ನು ನಮೂದಿಸಬೇಕು ಎಂದರೆ ಸಾಕ್ಷಿಯು ಮಾಡಬಹುದು ಎನ್ನುತ್ತಾರೆ.

ಚಾಸಾ 1 ಗಾಯಾಳುವನ್ನು ನಾನು 15 ನಿಮಿಷಗಳ ಕಾಲ ಪರೀಕ್ಷೆ ಮಾಡಿದೆ. ಚಾಸಾ 1 ರವರನ್ನು ಪರೀಕ್ಷೆ ಮಾಡುವ ಸಮಯದಲ್ಲಿ ನಾನು ಇನ್ನೊಬ್ಬರನ್ನು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿ. ತಿರುಮಲ ಚಾಸಾ 1 ಗಾಯಾಳುವಿಗೆ ನಾನೇ ಪರೀಕ್ಷೆ ಮಾಡಿದೆ. ಚಾಸಾ 1 ರವರನ್ನು ಬೆಳಿಗ್ಗೆ 9.50 ಕ್ಕೆ ಪರೀಕ್ಷೆ ಮಾಡಿ ಅದನ್ನು ನಿಪಿ 38 ರಲ್ಲಿ ನಮೂದು ಮಾಡಿದ್ದೇನೆ.

ಚಾಸಾ 1 ರವರ ಹೊರ ರೋಗಿ ಪುಸ್ತಕವಾದ ನಿಪಿ 38, ದಿಃ 30.09.2020 ರಂದು ಮಧ್ಯಾಹ್ನ 1.40.51 ಸೆಕೆಂಡಿನಲ್ಲಿ ಪಡೆಯಲಾಗಿದೆ ಎಂದರೆ ಸಾಕ್ಷಿಯು ಚಾಸಾ 1 ರವರ ತಂದೆಯಾದ ಚಾಸಾ 2 ರವರು ಸ್ವಾಮಿ ರವರು, serious ಆಗಿದ್ದರಿಂದ ಅವರಿಗೆ ಚಿಕಿತ್ಸೆಯನ್ನು ಕೊಡುತ್ತಿದ್ದೆನು. ಆಗ ಕೋವಿಡ್ ಪೀರಿಯಡ್ ಆಗಿದ್ದರಿಂದ, ಹೊರ ರೋಗಿ ಪುಸ್ತಕ ಲೇಟ್ ಆಗಿ ತಂದಿರಬಹುದು ಎಂದು ಉತ್ತರಿಸುತ್ತಾರೆ. ನಿಪಿ 38 ರಲ್ಲಿ ಬರೆದಿರುವ ಚಿಕಿತ್ಸೆಯು, ಸದರಿ ಪುಸ್ತಕವನ್ನು ಪಡೆದುಕೊಂಡ ಮೇಲೆ ಬರೆದಿದೆ ಎಂದರೆ ಸರಿ.

ನ್ಯವಾಗಿ ಒಬ್ಬ ವ್ಯಕ್ತಿಗೆ ರಕ್ತ ಹೆಪ್ಪು ಗಟ್ಟುವಿಕೆಗೆ 10-12 ನಿಮಿಷ ಬೇಕಾಗುತ್ತದೆ. ಗಾಯ ಆದ ತಕ್ಷಣ, heeling process ಶುರುವಾಗುತ್ತದೆ ಎಂದರೆ ಸಾಕ್ಷಿಯು some times, but not always ಎಂದು ಉತ್ತರಿಸುತ್ತಾರೆ. ಒಬ್ಬ ವ್ಯಕ್ತಿಯ ದೇಹದ Immunity ಆಧಾರದ ಮೇಲೆ, ರಕ್ತ ಹೆಪ್ಪು ಗಟ್ಟುವಿಕೆ ಅವಲಂಬಿಸಿರುತ್ತದೆ. ಚಾಸಾ 1 ಮತ್ತು ಚಾಸಾ 2 ರವರಿಗೆ ಅನಾರೋಗ್ಯದ ಹಿನ್ನೆಲೆ ಇರಲಿಲ್ಲ. 10-12 ಅಡಿ ಎತ್ತರದಿಂದ ಒಬ್ಬ ವ್ಯಕ್ತಿಯ ತಲೆಯ ಮೇಲೆ ಭಾರವಾದ ಕಲ್ಲು ಮು.ಮಾ.6 ನ್ನು ಎತ್ತಿ ಹಾಕಿದರೆ, ಆ ವ್ಯಕ್ತಿಯ ತಲೆ ಹೋಳಾಗುತ್ತದೆ ಎಂದರೆ ಸಾಕ್ಷಿಯು ಸಾಧ್ಯತೆ ಇದೆ ಆದರೆ ಸದರಿ ವ್ಯಕ್ತಿಯು miracle ಯಿಂದ escape ಆಗಿದ್ದಾರೆ ಎಂದು ಉತ್ತರಿಸುತ್ತಾರೆ. ಚಾಸಾ 2 ರವರ ತಲೆಯ ಮೇಲೆ ಜಜ್ಜಿದ ಗಾಯ ಆಗಿತ್ತು. ತಲೆಯ ಯಾವ ಭಾಗದಲ್ಲಿ ಜಜ್ಜಿದ ಗಾಯ ಆಗಿದೆ ಎಂದು ಗಾಯದ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ತಲೆಯ ಒಂದೊಂದು ಭಾಗಕ್ಕೂ ಮೆಡಿಕಲ್ ನಲ್ಲಿ ಹೆಸರು ಇದೆ ಎಂದರೆ ಸರಿ. ತಲೆಯ ಮೇಲಿನ ಭಾಗಕ್ಕೆ cerebrum ಎಂದು ಕರೆಯುತ್ತಾರೆ. cerebrum ಭಾಗಕ್ಕೆ ಪೆಟ್ಟು ಬಿದ್ದು ಗಾಯ ಆಗಿದೆ ಎಂದು ನಾನು ಗಾಯದ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ.

ಯಾವುದಾದರೂ ವ್ಯಕ್ತಿ ಹರಿತವಾದ, ಚೂಪಾದ ಕಲ್ಲಿನ ಮೇಲೆ ಅಥವಾ ಸ್ಟೇರ್ ಕೇಸ್ ನಿಂದ ಉರುಳಿ ಬಿದ್ದರೆ ನಿಪಿ 34 ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವ 1 ನೇ ಗಾಯ ಆಗುತ್ತದೆ ಎಂದರೆ ಸಾಕ್ಷಿಯು ಆಗುವ ಸಾಧ್ಯತೆ ಇರುತ್ತದೆ ಎಂದು ಹೇಳುತ್ತಾರೆ. ಬೀಳುವಂತಹ ಸಮಯದಲ್ಲಿ ಮು ಮಾ 6 ಕಲ್ಲಿನ ಮೇಲೆ ತಾಗಿದರೆ 1 ನೇ ಗಾಯ ಆಗುತ್ತದೆ ಎಂದರೆ ಸಾಕ್ಷಿಯು ಆಗುವ ಸಾಧ್ಯತೆ ಇದೆ ಎಂದು ಹೇಳುತ್ತಾರೆ.

ನಿಪಿ 35 ಗಾಯದ ಪ್ರಮಾಣ ಪತ್ರದಲ್ಲಿ ಇರುವ 1 ನೇ ಗಾಯವು, ಹರಿತವಾದ, ಚೂಪಾದ ಆಯುಧದಿಂದ ಆಗಬಹುದು ಎಂದರೆ ಸರಿ. ಕಿವಿಯ ಸುತ್ತ ಮುತ್ತ, ಯಾವುದೇ ಗಾಯಗಳು ಆಗಿದ್ದ ಬಗೆಗ ನಾನು ಗಮನಿಸಲಿಲ್ಲ. ಒಬ್ಬ ವ್ಯಕ್ತಿ ಮನೆಯಿಂದ ಬರುವಾಗ, ಹೋಗುವಾಗ, ಬಸ್ಸನ್ನು ಹತ್ತುವಾಗ ಚಾಪಾದ ಉಕ್ಕು ಕಿವಿಗೆ ತಾಗಿದರೆ 1 ನೇ ಗಾಯ ಆಗುತ್ತದೆ ಎಂದರೆ ಸಾಕ್ಷಿಯು ಆಗುವ ಸಾಧ್ಯತೆ ಇದೆ ಎಂದು ಹೇಳುತ್ತಾರೆ.

ನಾನು ಚಾಸಾ 1 ಮತ್ತು 2 ಗಾಯಾಳುಗಳನ್ನು ಪರೀಕ್ಷೆ ಮಾಡಿ ಚಿಕಿತ್ಸೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶರೀಕಾಗಿ ನಿಪಿ 34 ಮತ್ತು 35 ಸುಳ್ಳು ಗಾಯದ ಪತ್ರಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.